# Indian Catholic Youth Movement

## *Diocese of Shimoga*

Rev. Fr.Ronald Veigas
Director: ICYM, YCS/YSM
Email: shimogaicym@gmail.com
Ph: 9449547434

Yuva Mitra
C/O Infant Jesus Church
Sharavathinagar
Shimoga-577201

---

ಸುತ್ತೋಲೆ: 2012/1 ದಿನಾಂಕ 12–07–2012

ಆತ್ಮೀಯ ಗುರುಗಳೇ, ಕನ್ಯಾಭಗಿನಿಯರೇ ಮತ್ತು ಯುವಜನರೇ,

***“ಪವಿತ್ರ ಧರ್ಮಸಭೆಯು, ಯುವಜನರ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಶಿಕ್ಷಣ ನೀಡಿ, ಅವರನ್ನು ಯೇಸುವಿನ ನೈಜ ಹಿಂಬಾಲಕರನ್ನಾಗಿ ಮಾಡಿ, ಅವರಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ಹೊಂದಿದೆ”.*** **(EA 47).**

1) ನನ್ನನ್ನು ನಮ್ಮ ಧರ್ಮಧ್ಯಕ್ಷರು ಮೇ 28, 2012 ರಿಂದ ICYM, YCS/YSM ಸಂಚಲನಗಳ ನಿರ್ದೇಶಕರಾಗಿ ನೇಮಿಸಿರುತ್ತಾರೆ.
ಕಳೆದ 3 ವರ್ಷಗಳಿಂದ ವಂ. ಸ್ವಾಮಿ ರೋಮನ್ ಪಿಂಟೊ ಮಾಡಿರುವ ಸೇವೆಯನ್ನು ಪ್ರೀತಿಯಿಂದ ಸ್ಮರಿಸಿ ಧರ್ಮಕ್ಷೇತ್ರದ ಎಲ್ಲಾ ಯುವ ಮಿತ್ರರ ಪರವಾಗಿ ಹಾಗೂ ನನ್ನ ವೈಯುಕ್ತಿಕ ಪರವಾಗಿ ವಂದಿಸುತ್ತೇನೆ ಹಾಗೂ ನೂತನ ಜವಾಬ್ದಾರಿ, ಹರಪ್ಪನಹಳ್ಳಿಯ ಸುವಾರ್ತಪ್ರಸಾರ ನಿರ್ದೇಶಕರಾಗಿ ನಿಯೋಜಿಸಲ್ಪಟ್ಟಿರುವ ಅವರಿಗೆ ಶುಭ ಹರುಸುತ್ತೇವೆ.

2) ಧರ್ಮಕ್ಷೇತ್ರ ಮಟ್ಟದಲ್ಲಿ ಯುವ ಸಂಚಲನ ಬಲಪಡಿಸುವ ನಿಟ್ಟಿನಲ್ಲಿ ನಿಮ್ಮೆಲ್ಲರ ಸಹಕಾರವನ್ನು ಬಯಸುತ್ತೇನೆ. ಪ್ರತಿಯೊಂದು ಧರ್ಮಕೇಂದ್ರದಲ್ಲಿ 5ಕ್ಕಿಂತ ಹೆಚ್ಚು ಯುವಕ–ಯುವತಿಯರು (18 ರಿಂದ 28 ವಯಸ್ಸಿನ ತನಕ) ಇದ್ದಲ್ಲಿ ಯುವ ಸಂಚಲನ ಹಾಗೂ 8ನೇ ತರಗತಿಯಿಂದ II ಪಿ.ಯು.ಸಿ ತನಕದ ಯುವ–ಮಕ್ಕಳಿಗೆ (13 ರಿಂದ 18 ವಯಸ್ಸಿನ ತನಕ) ದರ್ಮಕೇಂದ್ರಗಳಲ್ಲಿ YCS, ಶಾಲೆಗಳಲ್ಲಿ YSM ಆರಂಬಿಸಲು ವಿನಂತಿಸುತ್ತೇನೆ. ಶನಿವಾರ ಹಾಗೂ ಬಾನುವಾರದ ದಿನಗಳಲ್ಲಿ ಧರ್ಮಕೇದ್ರಗಳ ಘಟಕಗಳಿಗೆ ಮತ್ತು ವಾರದ ದಿನಗಳಲ್ಲಿಶಾಲೆಗಳಿಗೆ ಭೇಟಿ ನೀಡಿ, ತರಬೇತಿ ನೀಡಲು ಸಿದ್ದನಿರುತ್ತೇನೆ. ಭೇಟಿಯ ದಿನವನ್ನು ಮುಂಚಿತವಾಗಿ ನಿಗದಿಪಡಿಸಿ ನನಗೆ ತಿಳಿಸಿದ್ದಲ್ಲಿ ತುಂಬಾ ಸಹಕಾರಿಯಗುತ್ತದೆ. ನಿಮ್ಮ ಸಹಕಾರಕ್ಕಾಗಿ ವಿನಂತಿಸುತ್ತೇನೆ.

3) ಆಗಸ್ಟ್ 15, 2012 ರೊಳಗೆ ನಿಮ್ಮ ಧರ್ಮಕೇದ್ರಗಳಲ್ಲಿ ICYM ಹಾಗೂ YCS, ಶಾಲೆಗಳಲ್ಲಿ YSM ಘಟಕಗಳನ್ನು ಕಾರ್ಯಾರಂಭ ಮಾಡಿ ಪದಾಧಿಕಾರಿಗಳನ್ನು ಚುನಾಯಿಸಿ, ಪದಾಧಿಕಾರಿಗಳ ಹೆಸರು

ಮತ್ತು ವಿವರವನ್ನು ಈ ಸುತ್ತೋಲೆಯಲ್ಲಿ ಲಗತ್ತಿಸಿದ ನಮೂನೆಯಲ್ಲಿ ಹಾಗೂ ವಾರ್ಷಿಕ ಯೋಜನೆಯನ್ನು 'ಯುವಮಿತ್ರ' ಕಛೇರಿಗೆ ಕಳುಹಿಸಲು ವಿನಂತಿ.

4) ಆಗಸ್ಟ್ ತಿಂಗಳ ಕೊನೆಯ ವಾರದಲ್ಲಿಧರ್ಮಕೇಂದ್ರದ ICYM ಚುನಾಯಿತ ಪದಾಧಿಕಾರಿಗಳಿಗೆ 1 ದಿನದ ತರಭೇತಿ ಶಿಬಿರ ಹಾಗೂ ಧರ್ಮಕ್ಷೇತ್ರದ ಕಾರ್ಯಾಕಾರಿ ಸಮಿತಿಯ ಪದಾಧಿಕಾರಿಗಳ (DEXCO) ಚುನಾವಣೆ ಶಿವಮೊಗ್ಗದಲ್ಲಿಜರಗುವುದು. ಚುನಾಯಿತ ಪದಾಧಿಕಾರಿಗಳು ಈ ಶಿಬಿರದಲ್ಲಿ ತಪ್ಪದೆ ಭಾಗವಹಿಸುವಂತದ್ದು. ಸ್ಥಳ ಮತ್ತು ದಿನಾಂಕವನ್ನು ದೂರವಾಣಿ ಮೂಲಕ ತಿಳಿಸಲಾಗುವುದು.

5) YCS/YSM ಸಚೇತಕರಾಗಿ ಯುವ ಮಕ್ಕಳಿಗಾಗಿ ಸೇವೆ ಸಲ್ಲಿಸಲು ಸಿದ್ಧರಿರುವ, 22 ವಯಸ್ಸು ಮೇಲ್ಪಟ್ಟ ಧರ್ಮಕೇಂದ್ರದ/ಶಾಲೆಯ ಆಸಕ್ತರನ್ನು ಆರಿಸಿ ಅವರ ಹೆಸರು ಹಾಗೂ ವಿವರವನ್ನು ಈ ಸುತ್ತೋಲೆಯಲ್ಲಿ ಲಗತ್ತಿಸಿದ ನಮೂನೆಯಲ್ಲಿ ತುಂಬಿಸಿ ಕಳುಹಿಸಲು ವಿನಂತಿಸುತ್ತೇನೆ.

6) 2012ರ 8ನೇ ಕರ್ನಾಟಕ ಪ್ರಾಂತೀಯಾ ಯುವ ಸಮ್ಮೇಳನವು ಸಪ್ಟೆಂಬರ್ 28–30, 2012 ರಲ್ಲಿ, ಬೆಳ್ತಂಗಡಿಯಲ್ಲಿ ನಡೆಯುವುದು. ಈ ಸಮ್ಮೇಳನದಲ್ಲಿ ಪ್ರತೀ ಧರ್ಮಕೇಂದ್ರದಿಂದ ತಲಾ ಇಬ್ಬರು (ಒಬ್ಬ ಯುವಕ ಮತ್ತು ಒಬ್ಬ ಯುವತಿ) ಬಾಗವಹಿಸಲು ಅವಕಾಶವಿದೆ. ಧರ್ಮಕೇಂದ್ರದಿಂದ ಬಾಗವಹಿಸುವ ಪ್ರತಿನಿಧಿಗಳ ಹೆಸರುಗಳನ್ನು ಅವರ ವಿಳಾಸ ಹಾಗೂ ದೂರವಾಣಿ ಸಂಖ್ಯೆಯ ಜೊತೆಗೆ 'ಯುವಮಿತ್ರ' ಕಛೇರಿಗೆ ಕಳುಹಿಸಲು ವಿನಂತಿಸುತ್ತೇನೆ. ಪ್ರಾಂತೀಯಾ ಯುವಸಮ್ಮೆಳನ–2012 ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಅಂತರ್ಜಾಲದ www.kryc.org ಹಾಗೂ ಆನ್‌ಲೈನ್ ರೆಜಿಸ್ಟ್ರೆಷನ್‌ಗಾಗಿ www.yuvajanotsava.org ಸಂಪರ್ಕಿಸಬಹುದಾಗಿದೆ.

ನಿಮ್ಮ ಪ್ರೋತ್ಸಾಹ, ಪ್ರಾರ್ಥನೆ ಸದಾ ಆಶಿಸುವ,

ಯುವ ಜನತೆಯಲ್ಲಿ ನಿಮ್ಮವ,

(ಫಾ. ರೋನಾಲ್ಡ್ ವೇಗಸ್)